ವರದಿ (DPR)ಗೆ ಕೇಂದ್ರ ವಿದ್ಯುತ್ ನಿಗಮ ಹಸಿರು ನಿಶಾನೆ ತೋರಿತ್ತು. ಕೇಂದ್ರ ವಿದ್ಯುತ್ ನಿಗಮದ ಅನುಮತಿಯನ್ನು ಮುಂದಿಟ್ಟುಕೊಂಡು ಕೆಪಿಸಿಎಲ್ ಯೋಜನೆ ಜಾರಿಗೆ ಮುಂದಾಗಿದೆ. ಯೋಜನಾ ಪ್ರದೇಶವು ಶರಾವತಿ ಸಿಂಗಳೀಕ ಅಭಯಾರಣ್ಯದ ಕೇಂದ್ರ ಭಾಗದಲ್ಲಿ ಬರುವುದರಿಂದ, ರಾಜ್ಯ ಸರ್ಕಾರದ ಅನುಮೋದನೆ ಮತ್ತು ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ.

ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಳಸುವ ಪೂರ್ವದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ ಅರಣ್ಯ ತೆರವುಗೊಳಿಸಲು ಅನುಮತಿ ಕಡ್ಡಾಯ. ಜೊತೆಗೆ ಪರಿಸರದ ಮೇಲಾಗುವ ಪರಿಣಾಮಗಳನ್ನು ಅಂದಾಜು ಮಾಡುವ (EIA) ಪ್ರಕ್ರಿಯೆಯೂ ಆಗಬೇಕು. ಅಲ್ಲದೇ ವನ್ಯಜೀವಿ ಕಾಯ್ದೆ (1972) ಅಡಿಯಲ್ಲಿ ಕೇಂದ್ರ ವನ್ಯಜೀವಿ ಮಂಡಳಿಯ ಅನುಮತಿ ಕಡ್ಡಾಯ. ಸರ್ಕಾರದ ಮಟ್ಟದಲ್ಲಿ ಪ್ರಭಾವ ಹೊಂದಿದ ಉಪಯೋಗಿ ಸಂಸ್ಥೆಯು ಈ ಎಲ್ಲಾ ಅನುಮತಿ ಪಡೆದು ಯೋಜನೆ ಜಾರಿ ಮಾಡಿತು ಎಂದಿಟ್ಟುಕೊಳ್ಳಿ. ಷರತ್ತಿನಂತೆ ನಾಶವಾದ ಅರಣ್ಯ ಪ್ರದೇಶದ ಬದಲಿಗೆ ಪರ್ಯಾಯ ಅರಣ್ಯ ಪ್ರದೇಶವನ್ನು ಬೆಳೆಸುವುದು ಅರಣ್ಯ ಇಲಾಖೆಯ ಜವಾಬ್ದಾರಿ. ದೇಶದ ಯಾವುದೇ ಭಾಗದಲ್ಲೂ ಇಂತಹ ಬದಲಿ ಅರಣ್ಯಗಳು ಯಶಸ್ವಿಯಾದ ಉದಾಹರಣೆಗಳಿಲ್ಲ. ಉದಾಹರಣೆಗೆ, ಆಂಧ್ರಪ್ರದೇಶದ ಪೋಲಾವರಂ ಅಣೆಕಟ್ಟೆಗಾಗಿ 3,731 ಹೆಕ್ಟೇರ್ ದಟ್ಟಾರಣ್ಯವನ್ನು ಮುಳುಗಿಸಲಾಯಿತು. ವನ್ಯಜೀವಿಗಳು ಮತ್ತು ಸ್ಥಳೀಯರು ತಮ್ಮ ನೆಲೆ ಕಳೆದುಕೊಂಡಿದ್ದು ಬಿಟ್ಟರೆ, ಬದಲಿ ಅರಣ್ಯ ಬೆಳೆಸುವುದು ಸಾಧ್ಯವಾಗಲಿಲ್ಲ.

ವಿದ್ಯುತ್ ಕ್ಷೇತ್ರದ ತಜ್ಞರು, ಪರಿಸರ ವಿಜ್ಞಾನಿಗಳು, ಹವಾಗುಣ ಬದಲಾವಣೆ ವಿಶ್ಲೇಷಕರು, ಜಲತಜ್ಞರು, ವನ್ಯಜೀವಿ ತಜ್ಞರು – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು, ಯಾವ ಕೋನದಿಂದ ನೋಡಿದರೂ ಈ ಯೋಜನೆ ಸಾಧು ಎಂದು ಪರಿಗಣಿಸುವುದಿಲ್ಲ. ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ಮಾಡಿ ಅಪಾರ ಅನುಭವವುಳ್ಳ ತಜ್ಞರ ಪ್ರಕಾರ, ಗೇರುಸೊಪ್ಪೆ ಅಣೆಕಟ್ಟೆನಿಂದ ಗುರುತ್ವಾಕರ್ಷಣೆಗೆ ವಿರುದ್ಧವಾಗಿ ನೀರನ್ನು ಮೇಲೆಕ್ಕೆತ್ತಲು ಶೇ. 24ರಷ್ಟು ಹೆಚ್ಚು ವಿದ್ಯುತ್ ಬೇಕಾಗುತ್ತದೆ. ಕರ್ನಾಟಕದ ವಿದ್ಯುತ್ ಇತಿಹಾಸವನ್ನು ಗಮನಿಸಿದರೆ, ಈ ಕ್ಷಣದವರೆಗೂ ಕರ್ನಾಟಕದಲ್ಲಿ ಬೇಡಿಕೆ ಇರುವಷ್ಟು ವಿದ್ಯುತ್ ಉತ್ಪಾದನೆ ಸಾಧ್ಯವಾಗಿಲ್ಲ ಎಂಬುದು ಕೆಪಿಸಿಎಲ್‌ನ ಕನಿಷ್ಠ ಮತ್ತು ಗರಿಷ್ಠ ಬೇಡಿಕೆಯ ಅನುಪಾತದ ಸೂತ್ರವನ್ನು ತಲೆಕೆಳಗು ಮಾಡುತ್ತದೆ. ವಿದ್ಯುತ್ತಿಗೆ ಕನಿಷ್ಠ ಬೇಡಿಕೆ ಇದ್ದಾಗ ಅಗತ್ಯವಿರುವ ನೀರನ್ನು ಗೇರುಸೊಪ್ಪೆಯಿಂದ ತಲಕಳಲೆ ಅಣೆಕಟ್ಟೆಗೆ ಎತ್ತಿ ತರುತ್ತೇವೆ ಎಂಬುದು ಕೆಪಿಸಿಎಲ್ ಹೇಳುವ ಹಸಿ ಸುಳ್ಳು. ಈ ಯೋಜನೆಗೆ ನಾಶವಾಗುತ್ತಿರುವುದು ಪಶ್ಚಿಮಘಟ್ಟಗಳ ದಟ್ಟವಾದ ಮಳೆಕಾಡು ಎಂಬುದು ಗಮನಾರ್ಹ.

ಪರಿಸರ ವಿಜ್ಞಾನಿಗಳ ಪ್ರಕಾರ ಹಾಲಿ ಇರುವ ದಟ್ಟಾರಣ್ಯಗಳನ್ನು ಉಳಿಸಿಕೊಳ್ಳುತ್ತಲೇ ಮತ್ತಷ್ಟು ನೈಸರ್ಗಿಕ ಅರಣ್ಯವನ್ನು ಬೆಳೆಸುವುದರಿಂದ ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಸಾಧ್ಯ. ಜಲತಜ್ಞರ ಪ್ರಕಾರ, 40–50 ವ್ಯಾಸದ ಸುರಂಗವನ್ನು ಅದು ಎಷ್ಟೇ ಕೆಳಗೆ ಕೊರೆದರೂ, ಅದು ಅಂತರ್ಜಲ ಹರಿವಿನ ಮೇಲೆ ಅಡ್ಡ ಪರಿಣಾಮ ಬಿಡುತ್ತದೆ. ನದಿ ಹರಿವಿನ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಮಳೆಮೋಡಗಳನ್ನು ಆಕರ್ಷಿಸುವ ಮಳೆಕಾಡುಗಳು ಕೊರತೆಯಾದರೂ, ಆ ಭಾಗದಲ್ಲಿ ಮಳೆ ಪ್ರಮಾಣ ನಿಶ್ಚಿತವಾಗಿ ಕಡಿಮೆಯಾಗಲಿದೆ.

ಕೆಪಿಸಿಎಲ್ ಒಪ್ಪಿಸುವ ಅಂಕಿ–ಅಂಶಗಳ ಗಿಳಿಪಾಠ ಯಾರಿಗಾದರೂ ಆಕರ್ಷಣೀಯವಾಗಿಯೇ ಕಾಣುತ್ತದೆ. ಯೋಜನೆಯ ನಂತರದಲ್ಲಿ ಮುಂದಿನ ನಲವತ್ತು ವರ್ಷಗಳಲ್ಲಿ ಇಷ್ಟು ಕೋಟಿ ಯೂನಿಟ್ ಕಡಿಮೆ ದರದ ವಿದ್ಯುತ್ ಲಭ್ಯವಾಗಲಿದೆ. ಈ ಯೋಜನೆಯಿಂದ ಉತ್ಪಾದಿಸಲಾಗುವ ಪರಿಸರಸ್ನೇಹಿ, ದುಬಾರಿಯಲ್ಲದ ವಿದ್ಯುತ್ ರಾಜ್ಯದ ಅಭಿವೃದ್ಧಿಗೆ ನೇರವಾಗಿ ಕಾರಣವಾಗಲಿದೆ

ಗೇರುಸೊಪ್ಪ ಅಣೆಕಟ್ಟುಗಳಿಂದಾಗಿ ಶರಾವತಿ ನದಿಯೀಗ ನದಿಯಾಗಿ ಉಳಿದಿಲ್ಲ. ಸರ್ಕಾರಿ ಪ್ರಾಯೋಜಿತ ಕೆಪಿಸಿಎಲ್ ಶರಾವತಿಯನ್ನು ಛಿದ್ರಗೊಳಿಸಿ ನದಿಯ ಸಹಜ ಹರಿವನ್ನು ಕಡಿತಗೊಳಿಸಿದೆ. ಕಾಯಂ ಆಗಿ ತೇವಾಂಶವನ್ನೇ ಬೇಡುವ ಜೀವವೈವಿಧ್ಯ ಸ್ಥಾನಿಕವಾಗಿ ಅಳಿದೇ ಹೋಗಿವೆ. ಗಾಯದ ಮೇಲೆ ಬರೆ ಎಂಬಂತೆ, ಖಾಸಗಿ ಕಂಪನಿಯೊಂದು ಮಹಾತ್ಮ ಗಾಂಧಿ ವಿದ್ಯುದಾಗಾರ ಮತ್ತು ಶರಾವತಿ ವಿದ್ಯುದಾಗಾರದ ಮಧ್ಯೆ ನದಿಗೆ ತಡೆಗೋಡೆ ಕಟ್ಟಿಕೊಂಡು 22 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಸೋಹಮ್ ಹೆಸರಿನ ಈ ಮಿನಿ ಹೈಡಲ್ ಯೋಜನೆಯು ಶರಾವತಿ ವಿದ್ಯುದಾಗಾರದವರೆಗಿನ ಸುಮಾರು ಮೂರು ಕಿ.ಮೀ. ನದಿಯ ಹರಿವನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇದೂ ಸಾಲದೆಂಬಂತೆ, ತಲಕಳಲೆ ಹಳ್ಳದ ನೀರನ್ನು ತಿರುಗಿಸಿಕೊಂಡಿದ್ದು, ತಡೆಗೋಡೆಯ ನಂತರದ ನದಿಯಲ್ಲಿ ಇರುವೆಗೂ ಕುಡಿಯಲು ನೀರಿಲ್ಲ ಎಂದರೆ ಪರಿಸ್ಥಿತಿ ಎಂತಹ ಘೋರವಾಗಿರಬಹುದು?


ಉದ್ದೇಶಿತ ಪಂಪ್ಡ್ ಸ್ಟೋರೇಜ್ ಯೋಜನಾ ಪ್ರದೇಶದ ಗುಡ್ಡದಿಂದ ಹರಿದು ಬರುತ್ತಿರುವ ಹಳ್ಳ

ಎಂಬ ಮತ್ತೊಂದು ಅರೆಸುಳ್ಳನ್ನು ಪೇರಿಸುತ್ತಾರೆ. ಯೋಜನಾ ವೆಚ್ಚ, ಲಾಭಗಳ ಲೆಕ್ಕಾಚಾರದಲ್ಲೂ ಎಡವಲಾಗಿದೆ. ಯೋಜನೆಗಾಗಿ ಬಳಸಲಾಗುವ ದಟ್ಟಾರಣ್ಯದ ನೈಸರ್ಗಿಕ ಸೇವೆಗಳಿಗೆ ಬೆಲೆ ನಿಗದಿ ಮಾಡಿಲ್ಲ. ಯಾವುದೇ ಒಂದು ಯೋಜನೆಯನ್ನು ಜಾರಿಗೊಳಿಸುವ ಪೂರ್ವದಲ್ಲಿ ವೆಚ್ಚ ಮತ್ತು ಲಾಭಗಳನ್ನು ಲೆಕ್ಕ ಹಾಕಿಯೇ ಮಾಡಬೇಕಾಗುತ್ತದೆ. ಇದಕ್ಕೊಂದು ರೂಢಿಗತ ಸೂತ್ರವಿದೆ:

ಉದಾಹರಣೆಗೆ, ಒಂದು ನೂರು ರೂಪಾಯಿ ಯೋಜನಾ ವೆಚ್ಚ ಎಂದುಕೊಂಡರೆ, ಕನಿಷ್ಠ ನೂರೈವತ್ತು ರೂಪಾಯಿ ಆ ಯೋಜನೆಯಿಂದ ಲಭ್ಯವಾಗಬೇಕು. ಆದರೆ, ಈ ಯೋಜನೆಯಲ್ಲಿ ಲಾಭಕ್ಕಿಂತ ನಷ್ಟದ ಪ್ರಮಾಣವೇ ಶೇ. 24ರಷ್ಟು ಹೆಚ್ಚಿದೆ.

ಚಕ್ರಾ, ಸಾವೇಹಕ್ಲು, ಲಿಂಗನಮಕ್ಕಿ, ತಲಕಳಲೆ,

## ಹೊನ್ನಾವರದ ಗತಿಯೇನು?

ಅತ್ತ ಕಣ್ಣಿಗೆ ಕಾಣುವಷ್ಟು ದೂರದವರೆಗೂ ಉಪ್ಪು ನೀರಿನಿಂದ ಆವೃತವಾದ ಸಮುದ್ರ, ಇತ್ತ ಮುಗಿಲೆತ್ತರಕ್ಕೆ ಚಾಚಿ ನಿಂತ ಗುಡ್ಡಬೆಟ್ಟಗಳು. ಎರಡರ ನಡುವೆ ಲಭ್ಯವಿರುವ ಚಿಕ್ಕ ಚಿಕ್ಕ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡ ಜನ. ಪಶ್ಚಿಮಘಟ್ಟಗಳ ಕಾಲಬುಡದಲ್ಲಿರುವ ಹೊನ್ನಾವರ ತಾಲ್ಲೂಕಿನ ಬಹುತೇಕ ಜನಸಂಖ್ಯೆ ಇಂತಹ ಪ್ರದೇಶದಲ್ಲಿ ಚಿಕ್ಕ ಹಿಡುವಳಿಯಲ್ಲಿ ಶರಾವತಿ ನದಿಯ ನೀರಿನಾಶ್ರಯದಿಂದ ತೋಟಗಾರಿಕೆಯನ್ನು ಅವಲಂಬಿಸಿ ಬದುಕು ಕಟ್ಟಿಕೊಂಡಿದೆ. ಈ ಭಾಗದಲ್ಲಿ ಬೆಳೆಯಲಾಗುವ ಕರಿ ವೀಳ್ಯೆದೆಲೆಗೆ ಅದರದ್ದೇ ಆದ ಔಷಧೀಯ ಗುಣವಿದೆ. ಅಲ್ಲಿನ ಭೌಗೋಳಿಕ ಹಾಗೂ ತೇವಾಂಶಭರಿತ ವಾತಾವರಣದಲ್ಲಿ ಮಾತ್ರ ಕರಿ ವೀಳ್ಯೆದೆಲೆ ಉತ್ಕೃಷ್ಟ ಗುಣಮಟ್ಟದಲ್ಲಿರುತ್ತದೆ.